**MVC No**: 1624/2022 **P.W**:1

**ದಿನಾಂಕ : 17.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಶ್ರೀ ಯು ಆರ್ ಎಸ. ವಕೀಲರಿಂದಃ-**

ಮಂಗಳ ಅಸ್ಪತ್ರೆಯ ಕೇಶ್ ಶೀಟನ್ನು ನಿಪಿ 16 ಎಂದು ಗುರುತಿಸಲಾಯಿತು.

**ಪಾಟೀ ಸಾವಾಲು 2ನೇ ಎದುರುದಾರರ ಪರ ಶ್ರೀ ಎಂ ಎಲ್ ವಕೀಲರಿಂದಃ**

ಪುಣ್ಯ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿ 1 ವರ್ಷ 2 ತಿಂಗಳ ನಂತರ ಹಾಸನದ ಮಂಗಳ ಆಸ್ಪತ್ರೆಗೆ ಹೋಗಿರುತ್ತೇನೆ ಎಂದರೆ ಸರಿ . ಪುಣ್ಯ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿ ಹಾಸನದ ಮಂಗಳ ಆಸ್ಪತ್ರೆಗೆ ಹೋಗುವ ಮಧ್ಯ ಅವಧಿಯಲ್ಲಿ ನಾನು ಬೇರೆ ಯಾವುದೇ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿ. ಪುಣ್ಯ ಆಸ್ಪತ್ರೆಯಿಂದ ಡಿಸ್ಚಾರಿಜ್ ಆದ ಮೇಲೆ ನನ್ನ ಎಲ್ಲಾ ಗಾಯಗಳು ವಾಸಿ ಆಗಿ ಹುಷಾರಾಗಿದ್ದೆ ಬೇರೆ ಯಾವುದೋ ರೀತಿಯಲ್ಲಿ ಪೆಟ್ಟು ಮಾಡಿಕೊಂಡು ಮಂಗಳ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ ಎಂದರೆ ಸರಿಯಲ್ಲ . ಮಂಗಳ ಆಸ್ಪತ್ರೆಯ ಡಿಸ್ಚಾರ್ಜ್ ಸಮ್ಮರಿ ಹಾಗೂ ಮೆಡಿಕಲ್ ಬಿಲ್ಲುಗಳು ಈ ಅಪಘಾತಕ್ಕೆ ಸಂಬಂಧಪಟ್ಟವುಗಳಲ್ಲ ಎಂದರೆ ಸರಿಯಲ್ಲ.

ಪುಣ್ಯ ಆಸ್ಪತ್ರೆಯ ಡಿಸ್ಚಾರ್ಜ್ ಬಿಲ್ಲಿನ ಮೇಲೆ ಆಸ್ಪತ್ರೆಯ ಸೀಲು ಹಾಕಿ ಹಣ ಮುಟ್ಟಿದೆ ಎಂದು ಬರೆಯಲಾಗಿದೆ ಎಂದರೆ ಸರಿ . ಅದೇ ರೀತಿ ಮಂಗಳ ಆಸ್ಪತ್ರೆಯ ಡಿಸ್ಚಾರ್ಜ್ ಬಿಲ್ಲಿನಲ್ಲಿ ಡಾ. ರವಿಯವರ ಸಹಿ ಮಾತ್ರ ಇದೆ ಎಂದರೆ ಸರಿ . ಕ್ರಮ ಸಂಖ್ಯೆ 22 ರ ಬಿಲ್ಲನ್ನು ಡಾ. ರವಿ ಯವರೊಂದಿಗೆ ಶರೀಕ್ ಆಗಿ ಸೃಷ್ಠಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಈ ದಿನ ನ್ಯಾಯಲಯಕ್ಕೆ ಯಾಹಿದೇ ಸ್ಟಿಕ್ಕಿನ ಸಹಾಯ ಇಲ್ಲದೆ ಬಂದಿದ್ದೇನೆ ಎಂದರೆ ಸರಿ .

ಒಂದನೇ ಎದುರುದಾರ ಮತ್ತು ಅವರ ಪರ ವಕೀಲರು ಗೈರು ಹಾಜರುದ ಆದ್ದರಿಂದ ಒಂದನೇ ಎದುರುದಾರ ಪರ ಪಾಟೀ ಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.

**MVC No**: 1624/2022 **P.W**:1

**<u>ಮರುವಿಚಾರಣೆ ಇಲ್ಲಃ</u>**

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.